## ಕಳೆದ ಸಂಚಿಕೆಯಲ್ಲಿ



ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ಪ್ರೀತಂನ ದಾಖಲೆ ಎಸೆತಕ್ಕೆ ಸುಮಿಯ ಸೆಳೆತದ ಶಕ್ತಿಯೂ ಕಾರಣವಾಗಿತ್ತು. ಯಾವ ಅಂಗಳ ಇಬ್ಬರ ನಡುವಣ ನಂಟನ್ನು ಬಲಗೊಳಿಸಿತೋ, ಅದೇ ಅಂಗಳ ಪರಸ್ಪರ ಅನುಮಾನಗಳನ್ನೂ ಮೂಡಿಸಿತು. ತಮ್ಮದೇ ಪ್ರಶ್ನೆಗಳನ್ನು ಎದೆಯಲ್ಲಿಟ್ಟುಕೊಂಡು ಕೊರಗತೊಡಗಿದ ಇಬ್ಬರೂ ಪರಸ್ಪರ ಭೇಟಿ ಮಾಡುವುದನ್ನು ತಪ್ಪಿಸಿಕೊಳ್ಳತೊಡಗಿದರು. ಮೌನದ ಕಾವಿನಲ್ಲಿ ಮುನಿಸು ಕರಗುತ್ತಾ ಬಂದಾಗ ಅನುಮಾನಗಳೂ ಕರಗಿ ಇಬ್ಬರಿಗೂ ತಮ್ಮ ತಪ್ಪು ಅರಿವಾಯಿತು. ಇದರಿಂದಾಗಿ ಇಬ್ಬರ ನಡುವಣ ಅನುರಾಗದ ಬಿಸುಪು ಮತ್ತಷ್ಟು ಗಾಢವಾಯಿತು. ಸುಮಿ ತನ್ನ ಪ್ರೇಮದ ವಿಷಯವನ್ನು ಅಣ್ಣ ವಿರುಪಾಕ್ಷಿಗೆ ತಿಳಿಸಿ ಹಗುರಾದಳು. ಮನೆತನದ ಮರ್ಯಾದೆಯ ಪ್ರತಿಷ್ಠೆ ಹಾಗೂ ಶೈಲತ್ತೆಯ ಪ್ರೇಮ ಪ್ರಕರಣದ ಪಾಠಗಳ ಹಿನ್ನೆಲೆಯಲ್ಲಿ ವಿರುಪಾಕ್ಷಿ ತಲೆ ಕೆಡಿಸಿಕೊಂಡ. ಇದರ ಪರಿವೆಯಿಲ್ಲದೆ ತಮ್ಮದೇ ಲೋಕದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಪ್ರಣಯದ ಪಕ್ಷಿಗಳ ಮೇಲೆ ಬರಸಿಡಿಲೊಂದು ಧುತ್ತನೆರಗಿತು.

ಚಿಟ್ಟಿಗೆ ಚಾಚಿದ್ದ ಸೈಕಲ್ಲು ನೆಟ್ಟಗೆ ಮಾಡಿದ. ಮಗನನ್ನು ತಡೆಯುವುದು ಅಸಾಧ್ಯ ಎನ್ನುವುದು ಆಯಿಗೆ ಗೊತ್ತಾಗಿತ್ತು. ಪಟಪಟ ಬಾಗಿಲು ಹಾಕಿ 'ಶ್ಶಿ ಶ್ಶಿ, ಒಬ್ನೇ ಹೋಗುದ್ ಬೇಡಾ. ನಾನೂ ಬತ್ತಿ, ತಡಿಯೋ' ಎಂದಳು. ಒಂಥರಾ ಗುಂಗಿನಲ್ಲಿದ್ದ ಪ್ರೀತಂ ಕೂಡ ಬೇಡಾ ಅನ್ನಲಿಲ್ಲ.

ಕಾರವಾರದ ಮುಖ್ಯ ರಸ್ತೆಗಳು ನಡುರಾತ್ರಿ ಮೈ ಅಗಲಿಸಿ ಆರಾಂದಲ್ಲಿ ವಿಶ್ರಮಿಸಿದ್ದವು. ಹಗಲಲ್ಲಿ ನಜ್ಜುಗುಜ್ಜಾದ ಒಳರಸ್ತೆಗಳು ಮೈಬಿಡಿಸಿಕೊಂಡಿದ್ದವು. ಸಮುದ್ರ ಮಾತ್ರ ತನ್ನದೇ ಲಹರಿಯಲ್ಲಿ ಮೊರೆಯುತಿತ್ತು. ಹಗಲಲ್ಲಿ ಅಸ್ತವ್ಯಸ್ತವಾಗಿರುವ ಪೇಟೆಯ ಅಂಗಡಿಗಳು ತಮ್ಮ ಸರಕುಗಳನೆಲ್ಲ ಒಳನುಂಗಿ ನೀಟಾಗಿದ್ದವು. ಬಸ್ ಡಿಪೋ ದಾಟಿದ ಮೇಲೆ ಚಿಕ್ಕ ಓಣಿಯಲ್ಲಿ ಸೈಕಲ್ಲು ನಡೆಸಿ ಶಾಂತಿ ಸದನ್ ಎನ್ನುವಲ್ಲಿ ನಿಲ್ಲಿಸಿದ. ದಣಪೆ ದಾಟಿ ಚಿಕ್ಕ ಅಂಗಳದ ಪಕ್ಕದಲ್ಲಿದ್ದ ಮೆಟ್ಟಿಲುಗಳನ್ನು ಹತ್ತಿ ಬಾಗಿಲೆದುರು ನಿಂತು ಮತ್ತೆ ಮತ್ತೆ ಬೆಲ್ ಮಾಡಿದ. ಹಿಂದಿನಿಂದ ಬಂದ ಗುಲಾಬಿ 'ಬೀಗ ಹಾಕರಲ್ಲೋ ಮಗ' ಎಂದಳು. ಪ್ರೀತಂ ಹುಚ್ಚನಂತಾದ. ಅಲ್ಲೇ ಮೆಟ್ಟಿಲ ಮೇಲೆ ಕೂತ. ಪಕ್ಕದ ಕಂಪೌಂಡಿನಿಂದ ನಾಯಿ ಒಂದೇ ಸಮನೆ ಬೊಗಳುತ್ತಿತ್ತು. 'ರಾತ್ರಿ ಹಿಂಗೆ ಬೇರೆಯವ್ರ ಕಂಪೌಂಡ್ ಒಳಗೆ ದಣಿಹುತ್ತ ಇರೂದ ಸರಿ ಅಲ್ಲ, ನಾಳೆ ವಿಚಾರ್ಸುನಿ, ಬಾ ಮಗ' ಎಂದು ಗುಲಾಬಿ ಪ್ರೀತಂನನ್ನು ಅಲ್ಲಿಂದ ಕಳಗಿಳಿಸಿದಳು. ದಣಪೆ ದಾಟುವಾಗ ಕೆಳಮನೆಯೊಳಗೆ ಝಗ್ಗನೇ ಬೆಳಕಾಯಿತು. ಬಾಗಿಲೂ ತೆರೆದುಕೊಂಡಿತು.

'ಯಾರು ಯಾರು? ಕೋಣು ಕೋಣು?' ಎನ್ನುವುದೂ 'ನಾವು ನಾವು.. ಆಮಿ ಆಮಿ' ಎಂಬ ಭಯದ ಧ್ವನಿಗಳೂ ಸಣ್ಣ ಕೋಲಾಹಲವನ್ನೆ ಉಂಟುಮಾಡಿದವು. ಕೆಲವರು ಗುಲಾಬಿಯ ಗುರುತು ಹಿಡಿದರು. 'ಅರೆ, ಗುಲಾಬಿ ರಾತ್ರಿ ಮೀನ ಮಾರುಕೆ ಬಂದ್ಯೆನೇ?' ಎಂದು ಮಶ್ಕರಿ ಮಾಡಿದರು. ಹಿಂಗಿಂಗೆ ಎಂದು ವಿಷಯ ತಿಳಿದ ಮೇಲೆ ಮನೆ ಓನರ್ 'ಅಜ್ಜಿ ಸೀರಿಯಸ್ಸು ಅಂತ ಅಣ್ಣ ತಂಗಿ ರಾತ್ರೋರಾತ್ರಿ ಊರಿಗೆ ಹೋದ್ರಲ್ಲ' ಎಂದರು. 'ಇಬ್ಬರಿಗೂ ಏನೋ ಕಸಪಿಸಿ ಆಗ್ತಿತ್ತು. ಬ್ಯಾರೆವ್ರ ಸುದ್ದಿ ನಮಗೆಂತಕೆ ಅಂತ ನಾ ಲಕ್ಷ ಹಾಕಲಿಲ್ಲ' ಎಂದಳು ಮನೆಯಮ್ಮ.

ಪ್ರೀತಂನ ಮೇಲಿನ ಹಲ್ಲೆಯ ಪ್ರಕರಣದಲ್ಲಿ ರೋಹಿತನ ಬಗ್ಗೆ ಸಂಶಯ ಪಟ್ಟವರಿದ್ದರು. ಸುಮಿಯ ಮೇಲೆ ಅವನಿಗೆ ಸೀಕ್ರೆಟ್ ಲವ್ ಇದೆ ಎಂಬ ಕಾರಣ ಕೊಟ್ಟಿದ್ದರು. ಆದರೆ ಕಠಿಣಕೋಣದಲ್ಲಿ ಟೀಚರ್ ಆಗಿದ್ದ ರೋಹಿತನ ಅಮ್ಮ ಮತ್ತು ಆಯಿ ನುಶಿಕೋಟೆಯ ಕನ್ನಡ ಶಾಲೆಯಲ್ಲಿ ಜೊತೆಯಲ್ಲಿ ಕಲಿತವರು. ಆಯಿಗೆ ಈ ಹುಡುಗನ ಮೇಲೆ ಗೆಳತಿಯ ಮಗ ಎಂಬ ಮಮತೆಯಿತ್ತು. ಹೀಗಾಗಿ ಅವನ ಮೇಲೆ ಸಂಶಯಪಟ್ಟವರ ಮೇಲೆ ಗನಾ ಬೈದಿದ್ದಳು. ಟೂರ್ನಮೆಂಟಿನ ದಿನ ಸುಮಿ ವಿಷಯದಲ್ಲಿ ಇಬ್ಬರಿಗೂ ಮಾತಿನ ಚಕಮಕಿ ಆದದ್ದು ನಿಜ. ಆದರೆ ಮನೆಗೆ ಬಂದು ಅವನೇ ತಾನೆಂದಿಗೂ ಹಲ್ಲೆ ಮಾಡುವಂಥ, ಮಾಡಿಸುವಂಥ ಹೀನ ಕೆಲ್ಸ ಮಾಡಲಾರೆ ಎಂದು ಹೇಳಿಹೋಗಿದ್ದಾನೆ. ಇನ್ನು ಕೆಲವರು ಸುಮಿಯ ಅಣ್ಣನೇ ಮಾಡಿಸಿರಬಹುದು ಎಂದು ಸಂದೇಹ ವ್ಯಕ್ತಪಡಿಸಿದ್ದರು. ಸುಮಿಯ ಅಣ್ಣನನ್ನು ಒಂದೆರಡು ಬಾರಿ ನೋಡಿದ್ದರೂ ಅವನೊಂದಿಗೆ ಇನ್ನೂ ಮಾತಾಡಿರಲಿಲ್ಲ. 'ಹೇ, ಪ್ರೀತ್ ಮುಂದಿನ ಸಂಡೇ ನನ್ನ ಅಣ್ಣನನ್ನು ಮೀಟ್ ಮಾಡಿಸುತ್ತೇನೆ. ಡೋಂಟ್ ವರಿ, ಅವನು ನನ್ನ ಫ್ರೆಂಡ್ ಥರ' ಅಂದಿದ್ದಳು ಸುಮಿ. ಸುಮಿಯ ಪ್ರಕಾರ ತಮ್ಮಿಬ್ಬರ ಸ್ನೇಹ ಪ್ರೀತಿ ಅವಳ ಅಣ್ಣನಿಗೂ ತಿಳಿದಿದೆಯಂತೆ. ಸಮ್ಮತಿಯೂ ಇದೆಯಂತೆ. ಅಂಥವನನ್ನು ಹಲ್ಲೆಯ ಆರೋಪಿ ಮಾಡುವುದು ಹೇಗೆ? ಆದರೆ ಒಂದು ಮಾತೂ ಹೇಳದೆ ಊರಿಗೆ ಹೊರಟುಹೋದದ್ದು ವಿಷಯ ಗಂಭೀರವಾಗಿದೆ ಎಂಬುದು ಪ್ರೀತಂನ ತಲೆಗೆ ಇನ್ನೊಂದು ಆಘಾತದಂತೆ ಅಪ್ಪಳಿಸಿತ್ತು. ಅಜ್ಜಿ ತುಂಬಾ ಹಚ್ಚಿಕೊಂಡಿದ್ದು ಪ್ರೀತಂನಿಗೆ ಗೊತ್ತಿತ್ತು. ಅವಳು ಸೀರಿಯಸ್ ಆಗಿದ್ದರೂ ಕನಿಷ್ಠ ಒಂದು ಕಾಲ್ ಮಾಡಿ ತಿಳಿಸದೇ ಹೋಗುತ್ತಾಳೆಂದರೆ, ಈಗ ಅವಳ ಫೋನೇ ರೀಚ್ ಆಗ್ತಿಲ್ಲ ಅಂದರೆ ಏನೋ ಲಫಡಾ ಆಗಿದೆ, ಸುಮಿ ತೊಂದರೆಯಲ್ಲಿದ್ದಾಳೆ ಎಂಬುದು ಪ್ರೀತಂನಿಗೆ ಪಕ್ಕಾ ಆಯಿತು. ಗಾಯದ ಹೊಲಿಗೆ ಬಿಡಿಸುವುದನ್ನೇ ಎದುರುನೋಡುತ್ತಿದ್ದ.

***

### ಬಿಸಿಲ ನಾಡಿನತ್ತ ಪ್ರೀತಂ

ಹುಡುಗ ಕಡಲತೀರದ ಕಾರವಾರದಿಂದ ಬಿಸಿಲನಾಡು ಕಲಬುರಗಿಗೆ ಹೊರಟಿದ್ದ. ಅದು ಬಯಲು ಸೀಮೆಯತ್ತ ಅವನ ಮೊದಲ ಪ್ರಯಾಣವಾಗಿತ್ತು. ಒಮ್ಮೆ ಅಂತರ್ ಜಿಲ್ಲಾ ಟೂರ್ನಮೆಂಟಿಗೆ ಅಂತ ಧಾರವಾಡಕ್ಕೆ ಹೋದದ್ದುಂಟು. ಆದರೆ ಅದನ್ನೂ ದಾಟಿ ಮೊತ್ತಮೊದಲ ಬಾರಿಗೆ ಹೋಗುತ್ತಿರುವುದು. ಆದರೂ ಅವನಿಗೆ ಗುಲ್ಬರ್ಗಾ ಅಂಥ ಅಪರಿಚಿತ ಪ್ರದೇಶ ಅನಿಸುತ್ತಿರಲಿಲ್ಲ. ಸುಮಿ ತನ್ನ ಅದೆಷ್ಟೋ ನೆನಪುಗಳಲ್ಲಿ ಗುಲ್ಬರ್ಗಾವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಳು. ಹೀಗಾಗಿ ಅಲ್ಲಿಯ ಭೌಗೋಳಿಕ ವಿಶಿಷ್ಟತೆ, ಬಿಸಿಲ ತಾಪ, ಜನರ ಆಚಾರ ವಿಚಾರಗಳು, ತಿಂಡಿತಿನಿಸುಗಳು, ಭಾಷೆ ಇತ್ಯಾದಿಗಳ ಬಗ್ಗೆ ಪ್ರೀತಂನಿಗೆ ಒಂದು ಸಾಮಾನ್ಯ ಗ್ರಹಿಕೆ ಇತ್ತು.

ಕಾರವಾರ–ಗುಲ್ಬರ್ಗ ಬಸ್ಸು ಹತ್ತಿ ಕೂತಿದ್ದ. ಕಿಟಕಿ ಬದಿ ಸೀಟೇ ಸಿಕ್ಕಿತ್ತು. ಬಸ್ ಸ್ಟಾಂಡಿಗೆ ಬಂದ ಚೈತ್ರಾ, ರೋಹಿತ್, ಚೇತನ್, ದೀಪಾಲಿ, ಗೌರವ್ ಯಾರಲ್ಲೂ ನಿಜವಾದ ಲವಲವಿಕೆ ಇರಲಿಲ್ಲ. ಅವರೆಲ್ಲ ಅವನನ್ನು ಹೋಗದಂತೆ ತಡೆಯಲು ಸೋತಿದ್ದರು. ಹಿಂದಿನ ರಾತ್ರಿ ಪ್ರೀತಂನ ಮನೆಯಲ್ಲಿ ಈ ಬಗ್ಗೆ ದೊಡ್ಡ ಚರ್ಚೆಯೇ ನಡೆದಿತ್ತು. ಸುಮಿಯನ್ನು ಹುಡುಕಿ ಕಲಬುರಗಿಗೆ ಹೋಗುವ ಅವನ ವಿಚಾರಕ್ಕೆ ಎಲ್ಲರೂ 'ಮಳ್ಳ ನೀನು' ಅಂದಿದ್ದರು. ಅವನ ಜೀವಕ್ಕೆ ಅಪಾಯವಿರುವುದನ್ನು ಮತ್ತೆ ಮತ್ತೆ ನೆನಪಿಸಿದ್ದರು. ರೋಹಿತ್ 'ನೀ ಹಾಂ ಅನ್ನು ನಾವೇ ಹೋಗಿ ಅವಳನ್ನು ಕಿಡ್ನ್ಯಾಪ್ ಮಾಡಿ ತರುತ್ತೇವೆ. ಆಲ್ ಇಸ್ ಫೇರ್ ಇನ್ ಲವ್ ಅಂಡ್ ಲವ್ ವಾರ್...' ಅಂದಿದ್ದ.

'ಲವ್ ನಿಂದು, ವಾರ್ ನಮ್ದು' ಎಂದು ತಮಾಷೆ ಮಾಡಿದ್ದ. 'ಬ್ಯಾಡ ಪ್ರೀತಂ, ಇವನ ಮಾತ್ರ ಕಳಿಸಬೇಡಾ. ಅಂವ ಕಿಡ್ನ್ಯಾಪ್ ಮಾಡಿ ಊರಿಗೆ ವಾಪಸ್ ಬರೂದು ಡೌಟು. ಬೆಕ್ಕಿನ ಕೈಲಿ ಮೀನು ಸುಟ್ಟಕ ಬಾ ಅಂದಂಗಾಗುದು' ಎಂದು ಚೇತನ್ ಅವರನ್ನೆಲ್ಲ ನಗಿಸಲು ಪ್ರಯತ್ನಿಸಿದ್ದ. ಆದರೆ ಅವನ ಜೋಕಿಗೆ ಅಂಥ ಉತ್ಸಾಹದ ಪ್ರತಿಕ್ರಿಯೆ ಬರಲಿಲ್ಲ. ಪ್ರೀತಂನೂ ಎಲ್ಲರನ್ನೂ ಚಿಯರ್ ಅಪ್ ಮಾಡಲು ಪ್ರಯತ್ನಿಸುತ್ತಿದ್ದ. 'ನೋಡಿ, ಯಾಕೋ ನನಗೀಗ ಜೀವದ ಬಗ್ಗೆ ಹೆದರಿಕೆಯಾಗ್ತಿಲ್ಲ. ನೀವು ಬೇಕಾದರೆ ಇದು ಪ್ರೇಮದ ಮಹಿಮೆಯೇ ಅನ್ನಿ. ಹೃದಯದಲ್ಲಿ ಪ್ರೀತಿ ಮತ್ತು ಭಯ ಸಾತ್ ಸಾತ್ ಇರುವುದು ಸಾಧ್ಯವಿಲ್ಲ' ಅಂದ. 'ಆಹಾಹಾ. ಪ್ರೇಮದಲ್ಲಿ ಪಿಎಚ್ಡಿ ಮಾಡಿದವರ ನಮೂನಿ ಮಾತಾಡ್ತಾ' ಎಂದಳು ಚೈತ್ರ. ಪ್ರೀತಂ ಗಂಭೀರವಾಗಿಯೆ ಇದ್ದ. 'ನಾನು ಸಾವಿನ ಭಯ ಮೀರಿದ್ದೇನೆ ಅಂತ ಹೇಳೋದಿಲ್ಲ. ಆದರೆ ನನ್ನ ಜೀವಕ್ಕೆ ಅಪಾಯವಿಲ್ಲ ಅನಿಸ್ತಾ ಇದೆ. ಒಂದ್ವೇಳೆ ಸುಮಿಯ ಕಡೆಯವರೇ ನನ್ನ ಮೇಲೆ ಅಟ್ಯಾಕ್